ವ್ಯವಹರಿಸಿ ಒತ್ತಡವಾಡಿ ಆದಷ್ಟು ಬೇಗನೆ ಇದಕ್ಕೆ ಸಂಬಂಧಪಟ್ಟ ಪ್ರೊಪೋಸಲ್‌ಗೆ ಮಂಜೂರು ಮಾಡಿಸಿಕೊಳ್ಳಬೇಕು ಎಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ.

ರಾಜ್ಯದಲ್ಲಿ ಎಸ್.ಸಿ./ಎಸ್.ಟಿ. ವಸತಿನಿಲಯಗಳ ಬಗ್ಗೆ

೧೩೨. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳ ಸಂಖ್ಯೆ ಹೆಚ್ಚಿಸಲು ಸರ್ಕಾರದ ಕಾರ್ಯಕ್ರಮಗಳೇನು ?

ಆ) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಒಳ್ಳೆಯ ಊಟ ಕೊಡಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು ?

ಇ) ಪ್ರೌಢಶಾಲೆಯಿರುವ ಸ್ಥಳಗಳಲ್ಲಿ ಒಂದು ವಿದ್ಯಾರ್ಥಿನಿಲಯದ ಕಟ್ಟಡ ಕಟ್ಟಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲು ಸರ್ಕಾರಕ್ಕೆ ಇರುವ ತೊಂದರೆಗಳೇನು ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು).—

ಅ) ೧೯೬೦–೬೧ನೇ ಸಾಲಿನಲ್ಲಿ ೫೦ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಹೊಸದಾಗಿ ಪ್ರಾರಂಭಿಸುವ ಪ್ರಸ್ತಾಪನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ೧–೬–೧೯೬೦ ರಿಂದ ಎಲ್ಲಾ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳ ಊಟದ ಪೆಚ್ಚವನ್ನು ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ ರೂ. ೧೦೦–೦೦ ರಿಂದ ೧೫೦–೦೦ಕ್ಕೆ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ರೂ. ೧೫೦–೦೦ ರಿಂದ ರೂ. ೨೦೦–೦೦ಕ್ಕೆ ಹೆಚ್ಚಿಸಲಾಗಿದೆ.

ಇ) ರಾಜ್ಯದಲ್ಲಿ ಒಟ್ಟು ೬೫೫ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳಿದ್ದು ಇವುಗಳ ಪೈಕಿ ೩೧೮ ಸರ್ಕಾರಿ ಕಟ್ಟಡಗಳಲ್ಲಿವೆ. ೧೦೦ ವಿದ್ಯಾರ್ಥಿನಿಲಯಗಳ ಕಟ್ಟಡಗಳು ವಿವಿಧ ನಿರ್ಮಾಣದ ಹಂತದಲ್ಲಿವೆ. ಉಳಿದ ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ಹಂತಹಂತವಾಗಿ ಕಟ್ಟಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳು ೧೯೬೦–೬೧ ನೇ ಸಾಲಿಗೆ ೫೦ ಹಾಸ್ಟೆಲ್‌ಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ೧೯೬೦–೬೧ನೇ ಇಸವಿಯು ಪಂಂಗಿಯುತ್ತಿದೆ ಇನ್ನು ಎಷ್ಟು ದಿವಸದಲ್ಲಿ ಕೊಡುತ್ತಾರೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ೧.೬.೬೦ ನೇ ದಿನಾಂಕದಿಂದ ವಿದ್ಯಾರ್ಥಿ ನಿಲಯದ ಊಟದ ಪೆಚ್ಚವನ್ನು ಪ್ರತಿ ವಿದ್ಯಾರ್ಥಿಗೆ ೧೦೦ ರಿಂದ ೧೫೦ ರೂಪಾಯಿಯೆಂದು ಹೆಚ್ಚು ಮಾಡಿದ್ದಾರೆ. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ೧೫೦ ರಿಂದ ೨೦೦ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ, ಪ್ರತಿ ಊಟಕ್ಕೆ ಲೆಕ್ಕ ಹಾಕಿದರೆ. ಎರಡೂವರೆ ರೂಪಾಯಿ ಸಹ ಆಗುವುದಿಲ್ಲ. ಪ್ರತಿ ವಿದ್ಯಾರ್ಥಿಗೆ ಈ ತರಹ ಕೊಟ್ಟರೆ ಹೇಗೆ ಸಾಕಾಗುತ್ತದೆ. ಎರಡೂವರೆ ರೂಪಾಯಿಯಂತೆ ಕೊಟ್ಟರೆ ಅದು ಮಧ್ಯಾಹ್ನದ ಶಿಂಡಿಗೂ ಸಾಕಾಗುವುದಿಲ್ಲ. ಆದ್ದರಿಂದ ಇದನ್ನು ಹೆಚ್ಚು ಮಾಡುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಇಂದು ಐದು ರೂಪಾಯಿ ಕೊಟ್ಟರೂ ಊಟ ಸಿಗದಂತಹ ಪರಿಸ್ಥಿತಿ ಇದೆ. ಐದು ರೂಪಾಯಿಗೆ ಒಂದು ಕೆ. ಜಿ. ಒಳ್ಳೆಯ ಅಕ್ಕಿ ಕೂಡ ಸಿಗುವುದಿಲ್ಲ. ಇಂತಹ ಕ್ಲಿಷ್ಟ ಪರಿಸ್ಥಿತಿ ಇದೆ. ದಯವಿಟ್ಟು ಇದರ ಬಗ್ಗೆ ಒಂದು ನಿರ್ದಿಷ್ಟವಾಗಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಒಂದು ಯೋಗ್ಯ ರೀತಿಯಲ್ಲಿ ಒಳ್ಳೆಯ ಊಟವನ್ನು ಕೊಡಲು ಅನುಕೂಲವಾಗುವಂತೆ ಮನ್ನೂರು ಆಥವಾ ನಾನ್ನೂರು ರೂಪಾಯಿಗಳಿಗೆ ಇದನ್ನು ಹೆಚ್ಚು ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಶಿವಣ್ಣ (ಕಾನೂನು ಹಾಗೂ ಸಮಾಜ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೆ, ಪಾಟೀಲರ ಸಲಹೆ ಬಹಳ ಒಳ್ಳೆಯದಿದೆ. ನಮ್ಮ ಸರ್ಕಾರ ೧೦೦–೦೦ ಇದ್ದಂಥ ಹಾಸ್ಟೆಲ್ ವಿದ್ಯಾರ್ಥಿ ವೇತನವನ್ನು ರೂ. ೧೫೦–೦೦ ಕ್ಕೆ ಏರಿಸಿದೆ ಹಾಗೂ ರೂ. ೧೫೦–೦೦ ಇದ್ದದ್ದನ್ನು ರೂ. ೨೦೦–೦೦ ಕ್ಕೆ ಏರಿಸಿದೆ. ಇದನ್ನು ರೂ. ೩೦೦–೦೦ ಮಾಡಬೇಕೆಂದು ಇವರು ಹೇಳುತ್ತಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಇಪತ್ತಿನ ದಿವಸ ಬೇಳೆ ಕೆ. ಜಿ. ಗೆ ರೂ. ೦೭ ಆಗಿದೆ, ಎಣ್ಣೆ ಕೆ. ಜಿ. ಗೆ ರೂ. ೪೦ ಆಗಿದೆ, ಸೌದೆ ಸಿಗುತ್ತಿಲ್ಲ. ಗ್ಯಾಸ್ ಸರಿಯಾಗಿ ಸಪ್ಲೈ ಆಗುತ್ತಿಲ್ಲ. ಇದು ನಿಮಗೆ ಗೊತ್ತಿದೆ. ಹಾಸ್ಟೆಲ್‌ಗಳು ಬಹಳ ಕಟ್ಟಿ ಸ್ಥಿತಿಯಲ್ಲಿವೆ. ಊಟದ ವ್ಯವಸ್ಥೆ ಚೆನ್ನಾಗಿಲ್ಲ. ವಿದ್ಯಾರ್ಥಿ ವೇತನವನ್ನು ರೂ. ೨೦೦ ಕ್ಕೆ ಹೆಚ್ಚಿಸಿ ಮಾಡಿರಬಹುದು. ಆದರೆ ಇವತ್ತು ಒಂದ. ರೂಪಾಯಿಯ ಬೆಲೆ ಎಷ್ಟು ಉಳಿದಿದೆ ಎಂಬ ಬಗ್ಗೆ ಪುನರ್ ಪರಿಶೀಲನೆ ಮಾಡುವುದು ಒಳ್ಳೆಯದು ಹಾಗೂ ವಿದ್ಯಾರ್ಥಿ ವೇತನವನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಪಿ. ವೆಂಕಟೇಶ್ —ಇದನ್ನು ಹೆಚ್ಚಿಸುವ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಕಳೆದ ಸಲ ಹೇಳಿದ್ದರು. ಅದನ್ನೇ ಈಗಲೂ ಹೇಳುತ್ತಿದ್ದಾರೆ, ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿ ವೇತನವನ್ನು ರೂ. ೫೦೦ ಕ್ಕೆ ಹೆಚ್ಚು ಮಾಡಿದರೆ ಒಳ್ಳೆಯದು.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಹೈಸ್ಕೂಲ್ ಇರುವ ಕಡೆಯಲ್ಲಿಯೇ ಹಾಸ್ಟೆಲ್ ಕಟ್ಟಬೇಕು. ಇದರ ಬಗ್ಗೆ ನಿರ್ದಿಷ್ಟವಾದ ಒಂದು ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಮಕ್ಕಳಿಗೆ ಬಹಳ ತೊಂದರೆಯಾಗುತ್ತದೆ. ೩೪೦ ಹಾಸ್ಟೆಲ್‌ಗಳನ್ನು ಕಟ್ಟುತ್ತೇವೆಂದು ಪ್ರಸ್ತಾವನೆ ಮಾಡಿದ್ದಾರಲ್ಲ. ಇದರ ಬಗ್ಗೆ ಎನ್ನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ? ಪರಿಶೀಲನೆ ಮಾಡುವುದು ಬೇಡ. ಮುಂದೆ ಆಗತಕ್ಕ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಇದರ ಬಗ್ಗೆ ನಿರ್ಣಯ ಮಾಡ ಬೇಕು ಹಾಗೂ ಇದನ್ನು ರೂ. ೩೦೦ ರಿಂದ ರೂ. ೪೦೦ ಕ್ಕೆ ಹೆಚ್ಚು ಮಾಡುವ ಬಗ್ಗೆ ನಿರ್ಣಯ ಮಾಡಬೇಕಾಗಿದೆ.

ಶ್ರೀ ಬಿ. ಶಿವಣ್ಣ.—ಈ ವರ್ಷ ೫೦ ಹಾಸ್ಟೆಲ್‌ಗಳನ್ನು ಮಂಜೂರು ಮಾಡಿದ್ದೇವೆ. ೬೮೫ ಹಾಸ್ಟೆಲ್‌ಗಳಲ್ಲಿ ೩೧೦ ಸರ್ಕಾರಿ ಕಟ್ಟಡದಲ್ಲಿವೆ ಇನ್ನುಳಿದವು ರೆಂಟ್‌ನಲ್ಲಿವೆ. ೧೦೦ ಹಾಸ್ಟೆಲ್‌ಗಳು ಕನ್‌ಸ್ಟ್ರಕ್ಷನ್ ಸ್ಟೇಜ್‌ನಲ್ಲಿವೆ.

ನಿರುದ್ಯೋಗಿಗಳಿಗೆ ಭತ್ಯೆ ಕೊಡುವ ಬಗ್ಗೆ

೨೮೨ ಶ್ರೀ ಪಿ. ಬಸವರಾಜ್ (ಬ್ರಹ್ಮಾವರ).—ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

ಅ) ರಾಜ್ಯದಲ್ಲಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೊಂದಾಯಿತ ನಿರುದ್ಯೋಗಿಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ ಮತ್ತು ಪ್ರತಿ ಜಿಲ್ಲೆಯಲ್ಲಿ ಪುರುಷರ ಮತ್ತು ಸ್ತ್ರೀಯರ ನಿರುದ್ಯೋಗಿಗಳ ಸಂಖ್ಯೆ ಬೇರೆ ಬೇರೆಯಾಗಿ ತಿಳಿಸುವುದು)

ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವಲ್ಲಿ ಸರ್ಕಾರ ವಿಶೇಷ ಯೋಜನೆಗಳನ್ನು ರೂಪಿಸಿದೆಯೇ ? ರೂಪಿಸಿದ್ದರೆ ವಿವರಗಳೇನು ?

ಇ) ನಿರುದ್ಯೋಗಿಗಳಿಗೆ ನಿರುದ್ಯೋಗಿ ಭತ್ಯೆ ನೀಡುವ ಆಲೋಚನೆ ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಸಿ. ಎಸ್: ನಾಡಗೌಡ (ಕಾರ್ಮಿಕ ಸಚಿವರು).—

ಅ) ರಾಜ್ಯದಲ್ಲಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೊಂದಾಯಿತ ನಿರುದ್ಯೋಗಿಗಳ ಸಂಖ್ಯೆ ೧೨,೫೬,೯೧೫ ಜಿಲ್ಲಾವಾರು ವಿವರವಿರುವ ಪಟ್ಟಿಯನ್ನು ಲಗತ್ತಿಸಿದೆ.

ಆ) ಇಲ್ಲ.

ಇ) ಇಲ್ಲ.